ಇ) ಮೈಸೂರು ಲ್ಯಾಂಪ್ಸ್ ಸಂಸ್ಥೆಗೆ ಬರಬೇಕಾಗಿರುವ (ಸಾಮಗ್ರಿ ಒದಗಿಸಿದ ಕುರಿತು ಬರಬೇಕಾಗಿರುವ) ಬಾಕಿಯ ಮೊತ್ತವೆಷ್ಟು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು). —

| | | |
|---|---|---|
| ಅ) ಬ್ಯಾಂಕುಗಳಿಗೆ | — | ೨೫೩.೦೭ ಲಕ್ಷ ರೂ.ಗಳು |
| ಹಣಕಾಸು ಸಂಸ್ಥೆಗಳಿಗೆ | — | ೩೭೦ ೧೮ ಲಕ್ಷ ರೂ.ಗಳು |
| ಠೇವಣಿ ಬಾಕಿ | — | ೩೩.೮೬ ಲಕ್ಷ ರೂ.ಗಳು |
| ಮೊತ್ತ | — | ೬೫೭.೧೧ ಲಕ್ಷ ರೂ.ಗಳೂ |

| ಆ) ವರ್ಷ | ಲಕ್ಷ ರೂ.ಗಳಲ್ಲಿ |
|---|---|
| ೧೯೮೩-೮೪ | ೨೩೪.೮೪ ಲಾಭ |
| ೧೯೮೪-೮೫ | ೨೬೫.೧೯ ಲಾಭ |
| ೧೯೮೫-೮೬ | ೫೩೩.೮೯ ಲಾಭ |

ಇ) ದಿನಾಂಕ ೨೮-೨-೮೭ ರವರೆಗೆ ಬರಬೇಕಾದ ಅಂದಾಜು ಬಾಕಿ ಮೊತ್ತ ರೂ. ೩೧೧.೯೨ ಲಕ್ಷ ರೂ.ಗಳು.

## ಶಿವಮೊಗ್ಗ ವೃತ್ತದಲ್ಲಿ ಅಧಿಸೂಚನೆ ಸಂಖ್ಯೆ ಡಿ. ಸಿ. ಎ., ಎ. ಎ. ಒ. ಓವರ್ ಸೀಯರ್ಸ್ ಹುದ್ದೆಯ ಬಗ್ಗೆ

೨೧೧೩. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಮಾನ್ಯ ವಾಣಿಜ್ಯ ಮತ್ತು ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ವೃತದಲ್ಲಿ ಅಧಿಸೂಚನೆ ಸಂಖ್ಯೆ ಡಿ. ಸಿ. ಎ., ಎ. ಎ. ಓ., ಸಿ. ವೈ. ಎನ್. ೮೦, ದಿನಾಂಕ ೬-೩-೮೫ ರಲ್ಲಿ ಬಿ. ಸಿ. ಎಂ. ವರ್ಗದ ೪ ವೀಟರ್ ಓದುವವರು/ಓವರ್ ಸೀಯರ್ಸ್ ಹುದ್ದೆಗಳಿದ್ದುವು. ಹಾಗಿದ್ದಲ್ಲಿ ಎರಡೇ ಹುದ್ದೆಗಳಿಗೆ ನೇಮಕಾತಿ ಮಾಡಲು ಕಾರಣವೇನು ?

ಆ) ೪ ಹುದ್ದೆಗಳಿಗೆ ಅಧಿಸೂಚನೆ ನೀಡಿದ್ದರೂ ಸಾಧಾರಣ ಪ್ರತಿಭೆ (ಜನರಲ್ ಮೆರಿಟ್) ವರ್ಗದಲ್ಲಿ ಎರಡೇ ಹುದ್ದೆಗಳಿಗೆ ನೇಮಕಾತಿ ಮಾಡಲು ಕಾರಣಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಶಿವಮೊಗ್ಗ ವೃತ್ತದಲ್ಲಿ ವೀಟರ್ ಓದುವವರು ಓವರ್/ಸೀಯರುಗಳು ನೇಮಕಾತಿಗಾಗಿ ಮಾರ್ಚ್ ೮೫ ರಲ್ಲಿ ನೀಡಿದ ಅಧಿಸೂಚನೆಯಲ್ಲಿ ೪ ಬಿ. ಸಿ. ಎಂ. ವರ್ಗದ ವೀಟರ್ ಓದುವವರು ಓವರ್ ಸೀಯರ್‌ರ ಹುದ್ದೆಗಳಿದ್ದುದು ನಿಜ. ಆದರೆ ವಿದ್ಯುತ್ ಮಂಡಳಿಯ ತನ್ನ ಆದೇಶದ ಸಂಖ್ಯೆ ಸಿ. ಎಲ್. ೬. ಟಿ ೪೪.ಬಿ ೧೬.೮೦ ೪೪ ೮೨-೮೩ ದಿನಾಂಕ ೧೩-೧೧-೪೪ ರಲ್ಲಿ ಅನುಸರಿಸಿದ ಸರ್ಕಾರಿ ಆಜ್ಞೆ ಸಂಖ್ಯೆ ಡಿ.ಪಿ.ಎ. ಆರ್. ೨೭ ಎಸ್.ಬಿ.ಸಿ. ೪೪ ದಿನಾಂಕ ೨೫-೯-೪೪ರ ಕಲಂ ೨ ರಲ್ಲಿ ರೋಸ್ಟರ್ ಪದ್ಧತಿಯನ್ನು ಪುನರ್ವಿಮರ್ಶಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕಾದಿರಿಸಿದ ಶೇಕಡವಾರು ಸಂಖ್ಯೆ ಹೆಚ್ಚಿಸಿರುವುದರಿಂದ ಎರಡು ಬಿ. ಸಿ. ಎಂ. ವರ್ಗದ ಹುದ್ದೆಗಳಿಗೆ ಮಾತ್ರ ನೇಮಕಾತಿ ಮಾಡಲಾಯಿತು.

ಆ) ಮೇಲೆ ಅ) ನ ಉತ್ತರದಲ್ಲಿ ತಿಳಿಸಿರುವಂತೆ ದಿನಾಂಕ ೨೫-೯-೧೯೮೪ರ ಸರಕಾರಿ ಆಜ್ಞೆಯನ್ನು ಅನುಸರಿಸಿದ ಕಾರಣ ಬಿ. ಸಿ. ಎಂ. ವರ್ಗದಲ್ಲಿ ಎರಡೇ ಹುದ್ದೆಗಳಿಗೆ ನೇಮಕಾತಿ ಮಾಡಲಾಯಿತು. ಜನರಲ್ ಮೆರಿಟ್ ವರ್ಗಕ್ಕೆ ಎರಡು ಹುದ್ದೆಗಳು ಅಧಿಸೂಚನೆಯಲ್ಲಿ ಸೇರಿದ್ದುವು.